Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂವತ್ಸರ 30 ಸಂಚಿಕೆ 248 | ಗುರುವಾರ 29—5—47 | ಬಿಡಿ ಪ್ರತಿ 3 ಪೈ

ದಂಗೆ ಅಡಗಿಸಲು ಹೆಚ್ಚು ಸೈನ್ಯ

ಕಲ್ಕತ್ತಾ ಮೇ 27 — ಜೂನ್ 2 ರ ನಂತರ ಗಲಭೆ ಭೀತಿಯಿರುವುದರಿಂದ ಬಂಗಾಳಕ್ಕೆ ಹೆಚ್ಚು ಸೈನ್ಯ ಅವಶ್ಯಕವೆಂದು ಗೌರ್ನರರು ಹೇಳಿದ್ದಾರೆ.

ವೈಸರಾಯರು ಡೆಲ್ಲಿಗೆ

ಲಂಡನ್ ಮೇ 28 — ಜೂನ್ 2 ರಲ್ಲಿ ಏರ್ಪಡಿಸಲಿರುವ ಭಾರತ ಮುಖಂಡರ ಸಮ್ಮೇಳನದಲ್ಲಿ ಭಾಗವಹಿಸಲು ವೈಸರಾಯರು ಡೆಲ್ಲಿಗೆ ನಾಳೆ ಹೊರಡುವರು. ಅವರ ಯೋಚನೆ ನಡೆಸಲು ಸಂಪೂರ್ಣಾಧಿಕಾರವು ಅವರಿಗೆ ಕೊಡಲಾಗಿದೆಯೆಂದು ಹೇಳಲಾಗಿದೆ.

ತಂಬೂಚೆಟ್ಟರ ಕೊಲೆ-ಪ್ರಯತ್ನ !

(ನಮ್ಮ ವಿಶೇಷ ವರದಿಕಾರರಿಂದ)

ಪುಟ್ಟಣ ಚೆಟ್ಟಿಯ ಪುರಭವನ (ಬೆಂಗಳೂರು) ಮೇ 28 — ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯು ಅಯ್ಯಯ್ಯ ಅಧಿವೇಶನ ಈ ದಿವಸ 12 ಗಂಟೆಗೆ ಸರಿಯಾಗಿ ಸಂಸ್ಥಾನದ ಪ್ರಧಾನಿಗಳಾದ ದಿವಾಕ್ ಬಹದ್ದೂರ್ ಸರ್. ಎ. ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಆಕರ್ಷಿಟ್‌ರವರು ಸಭೆಯನ್ನು ಪ್ರವೇಶಿಸಿದಾಗ ಸದಸ್ಯರು ಮತ್ತಿತರರು ತಮ್ಮ ಸ್ಥಾನಗಳಿಂದ ಎದ್ದು ಗೌರವವನ್ನು ಸೂಚಿಸಿದರು. ಅಧಿಕಾರಿ ವರ್ಗ, ಖಾಸಗೀ ಸಚಿವರುಗಳು ಸಭೆಯಲ್ಲಿ ಆಸನಾರೂಢರಾಗಿದ್ದರು.

ವಿಶೇಷ ಅತಿಥಿಗಳ ಪೀಠದಲ್ಲಿ ಶ್ರೀ ಗುಂಡಪ್ಪಗೌಡರು ಮುಂತಾದವರು ಮಂಡಿಸಿದ್ದರು.

ಪ್ರೇಕ್ಷಕ ಗ್ಯಾಲರಿಯಲ್ಲಿ ಸ್ತ್ರೀ ಮತ್ತು ಪುರುಷರ ಸಂಖ್ಯೆ ಸಾಧಾರಣವಾಗಿದ್ದಿತು.

ದಿವಾಕ್ — ಅಧ್ಯಕ್ಷರ ಭಾಷಣಕ್ಕೆ ಮುಂಚೆಯೇ ಕಾಂಗ್ರೆಸ್ ಪಕ್ಷದ ನಾಯಕ ಸ್ಥಾನದಲ್ಲಿರುವ ಶ್ರೀ ಪಾಲಹಳ್ಳಿಯವರು ಕಾರಣ ತೋರಿ (ಸತ್ಯವಾದಿಯಲ್ಲಿ ತಂತಿ ಸುದ್ದಿ ನಿನ್ನೆ ಆಜ್ಞಾಪಿಸಿದೆ) ತಮ್ಮ ಪಕ್ಷದೊಡನೆ ಸಭಾ ಪರಿತ್ಯಾಗ ಮಾಡಿದರು.

ದಿವಾಕ್ — ಅಧ್ಯಕ್ಷರ ಭಾಷಣದ ತುರ್ಜುಮೆಯನ್ನು ಸರ್ಕಾರಿ ತುರ್ಜುಮೆಗಾರರು ಮತ್ತು ಕನ್ನಡ ಸಾಹಿತ್ಯ ಸಮ್ಮೇಳನದ ಸಹಾಧ್ಯಕ್ಷರೂ ಆದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಓದಿದರು. ಕೊಲೆ ಮಾಡಲ್ಪಟ್ಟ ಶ್ರೀ ರಾಮಸ್ವಾಮಿ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು.

ದಿವಾಳಿಯೆದ್ದ ಲೇವಾದೇವಿಕಸಬುದಾರ ಧರ್ಮಂತ್ಮಾಕರ ಗೋಪಾಲಂತವ್ ಸಂಬಂಧದ ಮೊಕದ್ದಮೆಯಲ್ಲಿ ಶಂಕರ ಅಂಗೇಗೌಡನಾದ ನಾನು ಶ್ರೀನಿವಾಸರಾಜಪುರದವರ ಖಾಸಗೀ ಕಾರ್ಯದರ್ಶಿ ಅಮಾತ್ಯ ತಿರೋಮಣಿ ಪಿಳ್ಳೆ ತಂಬೂಚೆಟ್ಟಿಯವರನ್ನೂ ಕಾ

ದ್ವಿತೀಯ ಬಾರಿ ಕಾಂಗ್ರೆಸ್ ಸಭಾ ಪರಿತ್ಯಾಗ

ಫಿಮೆಯ ಕಾರ್ಯಗಳಿಗೆ ಸಂಬಂಧಪಟ್ಟ (ತಿದ್ದುಪಡಿ) ಮಸೂದಾ ಕಾನೂನನ್ನು ಶ್ರೀ ಕನಕರತ್ನ ರಾಜುರವರು ಸಭೆಯ ಮುಂದೆ ಮಂಡಿಸಿದರು.

ಪೂರ್ಣ ಜವಾಬ್ದಾರಿ ಸರ್ಕಾರದ ಮತ್ತು ಶ್ರೀ ಹನುಮಂತಯ್ಯನವರ ಬಿಡುಗಡೆಯಾಗಬೇಕೆಂಬ ಬಗ್ಗೆ ಈ ಮಸೂದೆಯನ್ನು ವಿರೋಧಿಸಿ ಸಭಾ ಪರಿತ್ಯಾಗ ಮಾಡುತ್ತೇನೆ ಎಂದು ಶ್ರೀ ಪಾಲಹಳ್ಳಿಯವರು ತಮ್ಮ ಪಕ್ಷದೊಡನೆ ಸಭೆಯನ್ನು ತ್ಯಜಿಸಿದರು.

ಈ ಮಸೂದೆಯನ್ನು ಪ್ರಜಾಪಕ್ಷವು ಅಂಗೀಕರಿಸಿ ಭಾಷಣ ಮಾಡಿದೆ

ಶ್ರೀ ಮರುಳಪ್ಪನವರು ಈ ಮಸೂದೆಯನ್ನು ಅಂಗೀಕರಿಸುತ್ತಾ, ಕಾಂಗ್ರೆಸ್ ಸಂಸ್ಥಾನವನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತಿಲ್ಲವೆಂಬುದು ಶಬ್ದಾಂಗ ತಪ್ಪು ಈ ಸರ್ಕಾರದಲ್ಲಿ ನಂಬಿಕೆ ಪವಿತ್ರವಾಗಿದೆ ಎಂದರು

ಮುಸ್ಲಿಂ ಲೀಗಿನ ನಾಯಕ ಜನಾಬ್ ಲೀಲ್ ಈ ಮಸೂದೆಯ ಮೇಲೆ ಮಾತನಾಡುತ್ತಾ, ಕಾಂಗ್ರೆಸ್ಸಿಗರು ಭಾವಚಿತ್ರ ಹಿಡಿದು ಓಟು ಬೇಟೆ ನಡೆಸುತ್ತಾರೆ, ಸಾಮ್ರಾಜ್ಯವಾದ ಪತನವಾದ ನಂತರ ಮೈಸೂರು ಸ್ವತಂತ್ರವಾಗಿಯೇ ಉಳಿಯಬೇಕು. ರಾಜ್ಯಾಂಗ ಸಭೆ — ಅ ಗುಂಪಿಗೆ ಸೇರಿ ಜಗಳವಾಡುವುದು ಬೇಡ. ಕಾಂಗ್ರೆಸಿಗರು ಸಂಸ್ಥಾನವನ್ನೇ ಒದಿಗೂ ಪ್ರತಿನಿಧಿಸುವುದಿಲ್ಲ ಈ ಮಸೂದೆಯನ್ನು ಒಪ್ಪುತ್ತೇನೆ ಎಂದರು. (ಚರ್ಚೆ ನಡೆಯುತ್ತಿದೆ.

ಸಂಸ್ಥಾನದಲ್ಲಿ ತೊಗರೀಬೇಳೆ ಅಭಾವದ ಬಗ್ಗೆ ಶ್ರೀ ಶಾಮರಾಜಯ್ಯಂಗಾರ್ಯರ ನಿಲುವಳಿ 4 ಗಂಟೆಗೆ ಚರ್ಚೆಗೆ ಬರುತ್ತವೆ.

ಮೃತ್ಯೂತ್ತರ ಸಂಗ್ರಹ

ಕಲ್ಕತ್ತಾ ಮೇ 27 — ಈ ದಿನ ಬೆಳಿಗೆ ಪೋಲೀಸರ ಮೇಲೆ 2 ಬಾಂಬು ಬಿದ್ದವು.

ವಾಷಿಂಗ್‌ಟನ್ ಮೇ 22 — ಯುದ್ಧ ವಿಪತ್ತಿಗೆ ಗುರಿಯಾದ ಯೂರೋಪಿ ಪೂರ್ವ ಏಷ್ಯಾ ಖಂಡಗಳ ದೇಶಗಳಿಗೆ ಪರಿಹಾರಕ್ಕೆ 35 ಕೋಟಿ ಡಾಲರ್ ಸಹಾಯ ನಿರ್ಣಯಿಸಲಾಗಿದೆ.

ಬ್ರಿಟೀಷು ಆಕ್ರಮಿತ ಜರ್ಮನೀ ಭಾಗಗಳಲ್ಲಿಯ ಜರ್ಮನಿ ಪತ್ರಿಕೆಗಳನ್ನು ರಷ್ಯಾಕ್ಕೆ ವ್ಯತಿರೇಕವಾಗಿ ಪ್ರಚಾರ ಮಾಡಲಿಕ್ಕೆ ಬ್ರಿಟೀಷು ಅಧಿಕಾರಿಗಳು ಆಜ್ಞಾಪಿಸಿರುವಂತೆ ರಷ್ಯಾ ಆಕ್ರಮಿತ ಜರ್ಮನಿಯಲ್ಲಿಯು ಒಂದು ಪತ್ರಿಕೆಯು ತಿಳಿಸಿದೆ.

ಮದರಾಸು ಮೇ 27 — ಗಿರಣಿ ಬಟ್ಟೆ ಮೇಲೆ ಕಂಟ್ರೋಲನ್ನು ತೆಗೆಯಲು ಸರಕಾರ ಯೋಚಿಸುತ್ತಿಲ್ಲವೆಂದು ಹೇಳಲಾಗಿದೆ.

ನವದೆಹಲಿ ಮೇ 28 — ದಕ್ಷಿಣ ಭಾರತದಿಂದ ಸೈನ್ಯ ಪಡೆಯು ಪಂಜಾಬಿಗೆ ಅಲ್ಲಿಯ ಶಾಂತಿ ಪರಿಪಾಲನೆಯಲ್ಲಿ ಸಹಾಯ ಮಾಡುವುದಕ್ಕಾಗಿ ಹೊರಟಿವೆಯೆಂದು ಹೇಳಲಾಗಿದೆ.

ಕಲ್ಕತ್ತಾ ಮೇ 27 — ಗಲಭೆಯಲ್ಲಿ 5 ಮಂದಿ ಸತ್ತು 23 ಮಂದಿ ಗಾಯಗೊಂಡಿರುವುದೆಂದೂ ಪೋಲೀಸರು 106 ಮಂದಿ ದಸ್ತಗಿರಿ ಮಾಡಿರುವರೆಂದು ಹೇಳಲಾಗಿದೆ.

ಕರಾಚಿ ಮೇ 27 — ಪಾಕೀಸ್ತಾನ ರಾಜ್ಯಾಂಗ ಸಭೆಯು ಅಧ್ಯಕ್ಷತೆಯನ್ನು ಮಿ|| ಜಿನ್ನರು ವಹಿಸುವರೆಂದು ಲೀಗಿನ ಕಾರ್ಯಕಾರಿ ಸಮಿತಿ ಸದಸ್ಯರಾದ ಮಿ|| ಖುರೋರವರು ಹೇಳಿದ್ದಾರೆ.

ಕರಾಚಿ — ಮೇ 27 — 4 ಮಂದಿ ಒಂದು ಟ್ಯಾಕ್ಸಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಸ್ವಲ್ಪ ದೂರ ಹೋದನಂತರ ಡ್ರೈವರಿಗೆ ಗುಂಡುಹೊಡೆದು ಅವನಲ್ಲಿದ್ದ ಎಲ್ಲಾ ಹಣಕಾಸನ್ನು ಚಿನ್ನದ ಗುಂಡಿಗಳನ್ನು ತೆಗೆದುಕೊಂಡು ಅವನನ್ನು ಅಚೆಗೆ ಎಸೆದು ಟ್ಯಾಕ್ಸಿಯೊಡನೆ ಪರಾರಿಯಾಗಿದ್ದವರು, ಇವರ ಪತ್ತೆಗಾಗಿ ಪೋಲೀಸರು ಏರ್ಪಾಡನ್ನು ಮಾಡಿದ್ದಾರೆ.

ಧ. ಯು. ಸ ಬುಲಿಟಿನ್

ಪ್ರಚಾರಕ—ರಾಜಶ್ರೀ ಎಸ್. ಗುರುರಾಜಾಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಸನಾತನಿಗಳ ವಿಜಯ

ದೆಹಲಿ ಮೇ 13

ಆ. ಭಾ. ವರ್ಣಾಶ್ರಮ ಸ್ವರಾಜ್ಯ ಸಂಘದ ಅಧ್ಯಕ್ಷರು ತಂತಿಯ ಮೂಲಕ ಈ ರೀತಿ ತಿಳಿಸುತ್ತಾರೆ ಪಂಢರಪುರದಲ್ಲಿ ಶ್ರೀ ಸಾನೆ ಗುರೂಜಿಯವರ ಆಮರಣ ಉಪವಾಸವು ನಿಷ್ಫಲವಾಯಿತು. ಅವರು ಉದ್ದಿಶ್ಯವನ್ನು ಸಾಧಿಸಲಸಮರ್ಥರಾಗಿ ಉಪವಾಸ ನಿಲ್ಲಿಸಿದರು. ಅವರ ವಿಚಾರವಾಗಿ ಕಾಂಗ್ರೆಸ್ ಪಕ್ಷೀಯ ಪತ್ರಿಕೆಗಳು ಜನರನ್ನು ಅಡ್ಡ ಮಾರ್ಗದಲ್ಲಿ ಕೆಡಹುವ ಸುಳ್ಳು ಪ್ರಚಾರ ಮಾಡಿದ್ದಾರೆ. ಜನರು ಖಂಡಿತವಂಚಿತರಾಗಬಾರದು. ಎಲ್ಲಿಯವರೆಗೆ ಸನಾತನಿಗಳ ರಕ್ತದ ಕೊನೆ ಬಿಂದುವಿರುವುದೊ ಅಲ್ಲಿಯವರೆಗೆ ಹರಿಜನರು ದೇವಾಲಯ ಪ್ರವೇಶಿಸಲಾರರು ಎಂದು ತಿಳಿಸಿದ್ದಾರೆ

ಧರ್ಮವೀರರ ಬಂಧನ

ದೆಹಲಿ ಮೆ 13

ಎರಡು ಧರ್ಮವೀರದಳಗಳು ಧರ್ಮಯುದ್ಧದಲ್ಲಿ 16 ನೇ ಸೇನಾಧಿಪತಿಗಳಾದ ಶ್ರೀ ಸೌರಂಗದಾಸರವರ [ಮಥುರಾ] ನೇತೃತ್ವದಲ್ಲಿ ಈ ದಿವಸ ' ವೈಸ್‌ರೀಗಲ್ ಲಾಡ್ಜ್ ' ನಲ್ಲಿ ಭಂಧಿತವಾದವು. ಆ ಕಾಲದಲ್ಲಿ ಸತ್ಯಾಗ್ರಹ ಮಾಡಿದ ಕುರುಡರನ್ನು ಪೋಲೀಸರು ಬಂಧಿಸಲಿಲ್ಲ. ಆ ಕುರುಡರು ' ನಾವು ಕುರುಡರಾದ ಮಾಕ್ಕೆಕ್ಕೆ ಸಮ್ಮ ಧರ್ಮಶ್ರದ್ಧೆಯು ಕುಂದಿಡೆ ! ನಮಗೆ ಧರ್ಮಯುದ್ಧದಲ್ಲಿ ಸ್ವಲ್ಪವಾದರೂ ತ್ಯಾಗ ಮಾಡುವ ಅಧಿಕಾರವಿಲ್ಲವೇ ? ಅದ್ದರಿಂದ ನಮ್ಮನ್ನೂ ಬಂಧಿಸಿ ' ಎಂದರು. ಸಂತ್ರಸ್ತ ಪೋಲೀಸರು ಅವರನ್ನು ಬಂಧಿಸಿ ಜೈಲಿಗೊಯ್ದರು.

ಬೊಂಬಾಯಿನ ಗಣೇಯತ್ರೀ ಸ್ವಾಮಿ, ಶ್ರೀ ರಾಮಹಿತರೂ, ಉಳ್ವಾರಿನ ಕಾಲೇಜು ಪ್ರೊಫೆಸರ್ ಶ್ರೀ ಕೃಷ್ಣಮಾಚಾರ್ಯರುಗಳು ಸಂಘದವರೊಡನೆ ಮಾತುಕತೆ ನಡೆಸಲು ದೆಹಲಿಗೆ ಬಂದಿದ್ದಾರೆ.

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇನರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

ಅ ಕ ರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ಡಿಪೊ ಇರುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Quality Printing

Ł. N. Press

Sriramp et, MYSORE

' ಶಕ್ತಿಸುಧಾ ' ಸೇವಿಸಿ

ಶಕ್ತಿಯನ್ನು ಹೊಂದಿ

.... ವುಡ್‌ಲ್ಯಾಂಡ್ಸ್ ಮೈಸೂರು ...

ತಾ|| 25-5-47 ರಿಂದ ಕಿಕ್ಕಿರಿದ ನೇ 4 ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಪ್ರತಿದಿನ 2 ಆಟಗಳು

ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ಮ್ಯಾಟ್ನಿ ಉಂಟು

ಬ್ರಿಟಿಷ್‌ಪ್ಲಾನಿಂಗ್ ಆಫೀಸರು ಮತ್ತು ಅವರ ಪತ್ನಿ

At Opera

6 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮೂಲತಿ, ರಾಮುಚಂದ್ರ ನಟಿಸಿರುವ

ರಾ ಜ ಕು ಮಾ ರಿ

(ತ ಮಿ ಳು)

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆಸಹಿತ ರೂ 1--12--0

Edited, Printed and Published by M. S Krishna Rao at the Satyavadi Press Chamaraj Agrahar, Mysore.